ಯೆಂಬ information ನನ್ನಲ್ಲಿಲ್ಲ. How many roads, have been taken up and what length has been finished, that information is not available.

Sri Ijari SIRASAPPA.—The purpose of my putting this question is not served by your answer. I wanted to know whether this grant was utilised and the extent and the distance of the roads that have been carried out in Bellary District. If you say that the information is not at your hand, atleast will you kindly give me the information later on, Sir?

Sri T. CHANNIAH.—Yes, that will be furnished.

Tannery workshops in the Kasaba Hobli, Bangalore North Taluk.

Q.—838. Sri K. V. BYRE GOWDA (Bangalore North).—

Will the Government be pleased to state:—

(*a*) the number of tannery work shops in the Kasaba Hobli, Bangalore North Taluk;

(*b*) the Health and Sanitary conditions of the locality;

(*c*) whether they would shift all the tanneries to a place elsewhere?

A.—Sri T. CHANNIAH (Minister for Public Health and Local Self-Government).—

(*a*) 62.

(*b*) The general sanitation is fairly satisfactory except in the villages of Devarajivanahalli and Kaval Byrasandra.

(*c*) No. Similar conditions will also arise in other places if the tanneries are shifted.

ಶ್ರೀ ಕೆ. ವಿ. ಬೈರೇಗೌಡ.—ಈ 62 ಫ್ಯಾಕ್ಟರಿಗಳಲ್ಲಿ ಎಷ್ಟು ಜನ ಕೂಲಿಗಾರರು ಕೆಲಸ ಮಾಡುತ್ತಿದ್ದಾರೆ?

ಶ್ರೀ ಟಿ. ಚನ್ನಯ್ಯ.— ನೋಟೀಸ್ ಬೇಕು.

ಶ್ರೀ ಕೆ. ವಿ. ಬೈರೇಗೌಡ.—ಆ ಸ್ಥಳವನ್ನು ತಾವು inspect ಮಾಡಿದ್ದೀರಾ?

ಶ್ರೀ ಟಿ. ಚನ್ನಯ್ಯ.—ಕೆಲವು ಪ್ರದೇಶಗಳನ್ನು inspect ಮಾಡಿದ್ದೇನೆ.

ಶ್ರೀ ಕೆ. ವಿ. ಬೈರೇಗೌಡ.—ಆ ಸ್ಥಳಗಳಲ್ಲಿ ಪ್ರತಿ ವರ್ಷವೂ ಕಾಲರಾ ಮತ್ತು ಪ್ಲೇಗು ಉಪದ್ರವಗಳಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—ಪ್ಲೇಗು, ಕಾಲರಾ ಇರುವುದು ಸರ್ಕಾರದವರ ಗಮನಕ್ಕೆ ಬಂದಿಲ್ಲ. ಅಂತೂ ಅಲ್ಲಿ sanitary conditions ಚೆನ್ನಾಗಿಲ್ಲವೆಂದು ಗೊತ್ತಾಗಿದೆ.

ಶ್ರೀ ಕೆ. ವಿ. ಬೈರೇಗೌಡ.—ಮುಂದೆ ಅಲ್ಲಿನ ಆರೋಗ್ಯವನ್ನು ಸರಿಮಾಡುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಟಿ. ಚನ್ನಯ್ಯ.—ಈ ಪ್ರದೇಶಗಳು ರೆವಿನ್ಯೂ ಪ್ರದೇಶದಲ್ಲಿರುವುದರಿಂದ, ಅದರಿಂದಾಗಿ Corporationನ್ನಿನ ಜ್ಯೂರಿಸ್ಡಿಕ್ಷನ್ನಿನಲ್ಲಿ ಇಲ್ಲದಿರುವುದರಿಂದ, ಕಾರ್ಪೊರೇಷನ್ ಕಮಿಷನರಾಗಲೀ, ಹೆಲ್ತ್ ಆಫೀಸರಾಗಲಿ ಅಲ್ಲಿನ health conditions ವಿಷಯದಲ್ಲಿ ಏನು ಕಾರ್ಯಕ್ರಮವನ್ನೂ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. Revenue landsನಲ್ಲಿ ಆ ಪ್ರದೇಶಗಳು ಸೇರಿರುವುದರಿಂದ ರೆವಿನ್ಯೂ ಇಲಾಖಾಧಿಕಾರಿಗಳು, ಡೆಪ್ಯುಟಿ ಕಮಿಷನರು ಕಾರ್ಯಕ್ರಮ ತೆಗೆದುಕೊಳ್ಳಬೇಕು. ರೈತರಿಗೆ ತೊಂದರೆಯಾಗತಕ್ಕ ವಿಷಯವಾದದ್ದರಿಂದ ಮತ್ತು ಕೆರೆಗಳ ವಿಷಯದಲ್ಲಿ ಯಾವರೀತಿಯಲ್ಲೂ sanitary ಮತ್ತು hygienic conditionsನ್ನು ಅನುಸರಿಸದಿರುವುದರಿಂದ, ಈ ಪ್ರದೇಶಗಳನ್ನು personal ಆಗಿ, intensive ಆಗಿ survey ಮಾಡಿ ನೂಕ್ತ ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂಬುದು ಸರ್ಕಾರದವರ ಗಮನದಲ್ಲಿದೆ. ಮುಂದೆ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಆರ್. ಮುನಿಸ್ವಾಮಯ್ಯ.—ಈ ಮಾಲೀಕರುಗಳಿಂದ ಹೆಲ್ತ್ ಕಾಂಟ್ರಿಬ್ಯೂಷನ್ ತೆಗೆದುಕೊಂಡು ಅವರಿರುವ ಸ್ಥಳವನ್ನು ನಿರ್ಮಲವಾಗಿಡಲು ಆಗುತ್ತದೆಯೇ?

ಶ್ರೀ ಟಿ. ಚನ್ನಯ್ಯ.—ನಾನೇ ಆ ಸ್ಥಳಗಳಿಗೆ ಖುದ್ದಾಗಿ ಹೋಗಿ ನೋಡಿದ್ದೇನೆ. ಸ್ಥಳೀಯ ಅಧಿಕಾರಿಗಳಿಗೆ ನೂಚನೆ ಕೊಡಲಾಗಿದೆ. ಈ ಬಗ್ಗೆ ನೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು.

ಶ್ರೀ ಆರ್. ಮುನಿಸ್ವಾಮಯ್ಯ.—ವಾರಕ್ಕೆ ಒಂದಾವರ್ತಿಯಂತೆ ಆದರೂ ಆ ಪ್ರದೇಶವನ್ನು ಹೆಲ್ತ್ ಇನ್ಸ್ಪೆಕ್ಟರುಗಳು ವಿಜಿಟ್ ಮಾಡುವಂತೆ ತಾವು ಒಂದು ಏರ್ಪಾಡನ್ನಾದರೂ ಮಾಡುತ್ತೀರಾ?

Sri T. CHANNIAH.—We will examine that.

ಶ್ರೀ ಆರ್. ಮುನಿಸ್ವಾಮಯ್ಯ.—ಈಗ ಈ ಟ್ಯಾನರಿ ನೀರು ಹರಿದುಹೋಗಲು ಒಳಚರಂಡಿ ವ್ಯವಸ್ಥೆಯನ್ನಾದರೂ ಮಾಡಲಾಗುವುದೇ?

ಶ್ರೀ ಟಿ. ಚನ್ನಯ್ಯ.—ಈ ಎಲ್ಲ ಕೆಲಸ ಕಾರ್ಯಗಳನ್ನೂ ಒಂದೇಸಲಕ್ಕೆ ಕೈಗೊಳ್ಳಲಾಗುವುದು.

Municipalities in Chitaldrug District (Financial Assistance).

Q.—841. Sri Mulka GOVINDA REDDY (Chitaldrug).—

Will the Government be pleased to state:—

(*a*) the names of municipalities in Chitaldrug District that have asked the Government for financial assistance for water supply and drainage schemes;

(*b*) whether estimates were prepared and sanctioned for any of the said municipalities;